ದಿನಾಂಕಃ 11-08-2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ** 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಎಮ್.ಐ.ಕೆ. ವಕೀಲರಿಂದ:

ಮೂಲ ಪುರುಷ ಮಲ್ಲಪ್ಪ ದ್ಯಾಮಪ್ಪ ಅಂಬಿಗೇರ ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಮೂಲ ಪುರುಷ ಮಲ್ಲಪ್ಪ ಮೃತ ನಂತರ ಅವರ ಕುಟುಂಬಕ್ಕೆ ಒಟ್ಟು ಆಸ್ತಿಗಳು ಎಷ್ಟು ಇರುತ್ತವೆ ಎಂದು ನನಗೆ ಗೊತ್ತಿರುತ್ತವೆ. ಹುನಗುಂದ ತಾಲೂಕಿನ ಮರೋಳ ಗ್ರಾಮದ ಜಮೀನ ರಿ.ಸ.ನಂ. 60/1 ಬ/1 ಕ್ಷೇತ್ರ 7 ಎಕರೆ 26 ಗುಂಟೆ, ಇನ್ನೊಂದು ಜಮೀನು 5 ಎಕರೆ ಹಾಗು ಒಂದು ಖುಲ್ಲಾ ಜಾಗ (ಪ್ಲಾಟ) ಇರುತ್ತದೆ. ಸದರಿ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸದರಿ ಜಮೀನು ಈಗ ಮುಳಗಡೆ ಆಗಿರುತ್ತದೆ. ಎರಡು ಜಮೀನು ಹಾಗು ಒಂದು ಪ್ಲಾಟ ಹೊರತುಪಡಿಸಿ ಬೇರೆ ಯಾವು ಆಸ್ತಿಗಳು ಮೂಲ ಪುರುಷ ಮಲ್ಲಪ್ಪನ ಕುಟುಂಬಕ್ಕೆ ಇರುವುದಿಲ್ಲ ಎಂದರೆ ಸರಿ. ಮೂಲ ಪುರುಷ ಮಲ್ಲಪ್ಪನ ಕುಟುಂಬಕ್ಕೆ ಮರೋಳ ಗ್ರಾಮದಲ್ಲಿ ಜಮೀನ ರಿ.ಸ.ನಂ. 30/1 ಎ ಕ್ಷೇತ್ರ 6 ಎಕರೆ 9 ಗುಂಟೆ ಹಾಗು ರಿ.ಸ.ನಂ.60/1 ಬಿ/2 ಕ್ಷೇತ್ರ 6 ಎಕರೆ 14 ಗುಂಟೆ ಜಮೀನಗಳು ಸಹ ಹೊಂದಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. 1 ನೇ ವಾದಿ ನನ್ನ ತಾಯಿ ಇರುತ್ತಾಳೆ. 3 ಮತ್ತು 4 ನೇ ವಾದಿಯರು ನನ್ನ ಸಹೋದರರು. ಗಂಗೂಬಾಯಿ ಹನಮಪ್ಪ ಅಂಬಿಗೇರ ನನಗೆ ಅತ್ತೆ ಆಗಬೇಕು. ಕನಕಪ್ಪ ಮಲ್ಲಪ್ಪ ಅಂಬಿಗೇರ ನನ್ನ ದೊಡ್ಡಪ್ಪ. ನಾಗಪ್ಪ ಮಲ್ಲಪ್ಪ ಅಂಬಿಗೇರ ನನ್ನ ತಂದೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬಾಗಲಕೋಟ 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಅಸಲ ದಾವಾ ಸಂ. 120/1997 ರಲ್ಲಿ ದಿ: 17-11-1998 ರಲ್ಲಿ ತೀರ್ಪು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ನನ್ನ ತಂದೆಗೆ ಸದರಿ ಅಸಲ ದಾವಾ ಸಂ. 120/1997 ರಲ್ಲಿ ಹಿಸ್ಸೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ನ್ಯಾಯಾಲಯದಿಂದ ತೀರ್ಪು ಆಗಿರುತ್ತದೆ ಸದರಿ ವಿಷಯ ಗೊತ್ತಿದ್ದರು ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ತಂದೆ, ಅತ್ತೆ ಹಾಗು ಕಾಕಾ ಅವರು ಹುನಗುಂದ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಅಸಲದಾವಾ ಸಂ.20/2013 ನ್ನು ಹೂಡಿದ್ದರು ಸದರಿ ದಾವೆಯಲ್ಲಿ ರಾಜಿ ಆಗಿರುತ್ತೀರಾ ಎಂದರೆ ಸರಿ. ಮರೋಳ ಗ್ರಾಮದ ಜಮೀನ ರಿ.ಸ.ನಂ.30/1 ಬಿ ಕ್ಷೇತ್ರ 5 ಎಕರೆ 24 ಗುಂಟೆ ಜಮೀನು ಮುಳಗಡೆ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನಿಗೆ ಸಂಬಂಧಿಸಿದ ಪರಿಹಾರ ಹಣವನ್ನು ಎಲ್ಲರು ಕೂಡಿ ಪಡೆದುಕೊಂಡಿರುತ್ತೇವೆಂದರೆ ಸರಿ. ನನ್ನ ದಾವೆಯಲ್ಲಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಇತರೆ ಆಸ್ತಿಗಳಿಗೆ ಭಾಗ ಆಗಿರುತ್ತದೆ ದಾವಾ ಆಸ್ತಿಗಳಲ್ಲಿ ಭಾಗ ಆಗಿರುವುದಿಲ್ಲ ಎಂದು ನೀವು ನಿಮ್ಮ ದಾವೆಯಲ್ಲಿ ಹೇಳಿ ಬರೆಯಿಸಿದ್ದೀರಾ ಎಂದರೆ ಸಾಕ್ಷಿ ಬರೆಯಿಸಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಅತ್ತೆ ದಾವಾ ಆಸ್ತಿಗಳಲ್ಲಿರುವ ತನ್ನ ಹಿಸ್ಸೆಯನ್ನು ಬಿಟ್ಟುಕೊಟ್ಟಿರುವ ಬಗ್ಗೆ ಗೊತ್ತಿದೆಯಾ ಅಥವಾ ಇಲ್ಲ ಎಂದರೆ ಸಾಕ್ಷಿ ಬಿಟ್ಟುಕೊಟ್ಟಿರುವುದಿಲ್ಲ ಎಂದು

ಸಾಕ್ಷಿ ನುಡಿಯುತ್ತಾರೆ. ನಿಮ್ಮ ಅತ್ತೆಯ ವಾರಸಾದರರನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ಮೂಲ ಪುರುಷ ಮಲ್ಲಪ್ಪನ ಕುಟುಂಬಕ್ಕೆ ಒಟ್ಟು ಆಸ್ತಿಗಳು ಎಷ್ಟು ಎಂದರೆ ಸಾಕ್ಷಿ 5 ಎಕರೆ 26 ಗುಂಟೆ ಮುಳಗಡೆ ಜಮೀನು, 7 ಎಕರೆ 30 ಗುಂಟೆ ಜಮೀನು ಹಾಗು ಒಂದು ಖುಲ್ಲಾ ಜಾಗ ಇರುತ್ತವೆ. ಮರೋಳ ಗ್ರಾಮದ ಜಮೀನ ರಿ.ಸ.ನಂ.30/1 ಎ ಕ್ಷೇತ್ರ 6 ಎಕರೆ 9 ಗುಂಟೆ, ರಿ.ಸ.ನಂ.60/1 ಬಿ/2 ಕ್ಷೇತ್ರ 6 ಎಕರೆ 14 ಗುಂಟೆ ಜಮೀನು, ರಿ.ಸ.ನಂ.60/1 ಬಿ/1 ಕ್ಷೇತ್ರ 7 ಎಕರೆ 26 ಗುಂಟೆ ಜಮೀನು ಹಾಗು ವಿಪಿಸಿ ಸಂ.785 ವಿಸ್ತೀರ್ಣ 18 X 12 Mtrs ಖುಲ್ಲಾ ನಿವೇಶನ ಮೂಲ ಪುರಷ ಮಲ್ಲಪ್ಪನ ಕುಟುಂಬದ ಆಸ್ತಿಗಳು ಇರುತ್ತವೆಂದರೆ ಸರಿ. ದಾವಾ ಜಮೀನು ಒಂದು ಎಕರೆ ಅಂದಾಜು ಕಿಮ್ಮತ್ತು 15 ರಿಂದ 20 ಲಕ್ಷ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅದೇ ರೀತಿ ಖುಲ್ಲಾ ನಿವೇಶನ ಸಹ ಈಗ 25 ಲಕ್ಷ ಕಿಮ್ಮತ್ತು ಹೊಂದುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಮೂಲ ದಾವಾ ನಡೆದಿದ್ದರ ಬಗ್ಗೆ ನಿಮಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನೀವು ನಿಮ್ಮ ಅಜ್ಜನ ಆಸ್ತಿಗಳಿಗೆ ಸಂಬಂಧಿಸಿ ದಾಖಲೆಗಳನ್ನು ಪರಿಶೀಲಿಸಿ ಅದನ್ನು ದಾವೆಯಲ್ಲಿ ಉಲ್ಲೇಖಿಸಿರತ್ತೀರಾ ಎಂದರೆ ಸಾಕ್ಷಿ ಉಲ್ಲೇಖಿಸಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ಮುಳಗಡೆ ಜಮೀನಿನ ಪರಿಹಾರ ಪಡೆದ ಬಗ್ಗೆ ಈ ದಾವೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಮುಳಗಡೆ ಜಮೀನಿನ ಪರಿಹಾರ ಪಡೆದಾಗ ದಾವಾ ಆಸ್ತಿಗಳಿಗೆ ನಮ್ಮದು ಪಾಲು ಇರುತ್ತದೆ ಎಂದು ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ ಇದಕ್ಕಿಂತ ಮುಂಚೆನಿಂದಲು ನಮ್ಮ ಪಾಲು ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾದ ಕಾರಣ ನನ್ನ ದಾವೆಯಲ್ಲಿ ಸುಳ್ಳು ಹೇಳಿ ಬರೆಯಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿ ಬಗ್ಗೆ ನನಗೆ ಏನು ಗೊತ್ತಿಲ್ಲ ಈಗಾಗಲೇ ಭಾಗ ಮಾಡಿಕೊಂಡಿದ್ದರು ಬಗ್ಗೆ ಎಲ್ಲ ಗೊತ್ತಿದ್ದರು ಸಹ ಈಗ ನನಗೆ ಅನಾವಶ್ಯಕ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳು ಕಿಮತ್ತು ಎಷ್ಟು ಇರುತ್ತದೆ ಎಂದು ನೊಂದಣಿ ಕಛೇರಿಯಿಂದ ತಿಳಿದುಕೊಂಡು ದಾವೆಯನ್ನು ಹೂಡಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ